ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ವಿಷಯ:- ಶಿರಾ ತಾಲ್ಲೂಕಿನ ಹೊಂಬಳ್ಳಿ ಯೋಜನೆಯಡಿಯಲ್ಲಿ ಹಣ್ಣಿನ ಸಸಿಗಳ ವಿತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 12 (228)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿರಾ ತಾಲ್ಲೂಕಿನಲ್ಲಿ ಹೊಂಬಳ್ಳಿ ಯೋಜನೆಯಡಿಯಲ್ಲಿ ಯಾವ ವಿಧವಾದ ಹಣ್ಣಿನ ಸಸಿಗಳನ್ನು ವಿತರಿಸಲಾಗಿದೆ?

ಆ) 1995-96ನೇ ಸಾಲಿನಲ್ಲಿ ಫಲಾನುಭವಿಗಳಿಗೆ ಕೂಲಿಯ ಹಣ ಮತ್ತು 1996-97ನೇ ಸಾಲಿನ ನಿರ್ವಹಣಾ ವೆಚ್ಚವನ್ನು ವಿತರಿಸಲಾಗಿದೆಯೇ?

ಇ) ಹಾಗಿದ್ದಲ್ಲಿ, ಯಾವಾಗ ಕೂಲಿ ಮತ್ತು ನಿರ್ವಹಣಾ ವೆಚ್ಚದ ಹಣವನ್ನು ಬಿಡುಗಡೆ ಮಾಡಲಾಗಿದೆ ಮತ್ತು ಅದರ ಮೊತ್ತವೆಷ್ಟು?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):-

ಅ) ಶಿರಾ ತಾಲ್ಲೂಕಿನಲ್ಲಿ ಹೊಂಬಳ್ಳಿ ಯೋಜನೆಯಡಿಯಲ್ಲಿ ಒಟ್ಟು 18,851 ಕಸಿ:ಸಸಿಗಳನ್ನು 1,215 ಫಲಾನುಭವಿಗಳಿಗೆ ವಿತರಿಸಲಾಗಿದೆ. (ವಿವರಗಳನ್ನು ಅನುಬಂಧ-1ರಲ್ಲಿ ಕಾಣಿಸಲಾಗಿದೆ.

ಆ) 1995-96ನೇ ಸಾಲಿನಲ್ಲಿ ಫಲಾನುಭವಿಗಳಿಗೆ ಕೂಲಿ ಹಣ ವಿತರಿಸಲಾಗಿಲ್ಲ ಹಾಗೂ 1996-97ನೇ ಸಾಲಿನ ನಿರ್ವಹಣಾ ವೆಚ್ಚಗಳನ್ನು ಸಹ ವಿತರಿಸಲಾಗಿಲ್ಲ.

ಇ) ಉದ್ಭವಿಸುವುದಿಲ್ಲ.

ಅನುಬಂಧ

ಕ್ರಮ ಸಂಖ್ಯೆ	ಬೆಳೆಯ ಹೆಸರು	ವಿತರಿಸಲಾದ ಗಿಡಗಳ ಸಂಖ್ಯೆ	ಫಲಾನುಭವಿಗಳ ಸಂಖ್ಯೆ
1.	ಮಾವು	37,125	1,097
2.	ಸಪೋಟ	6,666	89
3.	ಹುಣಸೆ	2,000	20
4.	ದಾಳಿಂಬೆ	3,060	09
	ಮೊತ್ತ	48,851	1,215

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಹೊಂಬಳ್ಳಿ ಎನ್ನತಕ್ಕ ಈ ಯೋಜನೆಯನ್ನು ಶಿರಾ ತಾಲ್ಲೂಕಿಗೆ ಸೀಮಿತವಾಗಿ 1994-95 ಮತ್ತು 95-96ರ ಸಾಲಿಗೆ 60 ಲಕ್ಷ ರೂಪಾಯಿಗಳ ಯೋಜನೆಯನ್ನು ಹಾಕಿದ್ದರು. ಈ ಯೋಜನೆಯಲ್ಲಿ ಒಂದು ಎಕರೆ ಒಂದೂವರೆ ಎಕರೆ ಜಮೀನು ಇರುವವರಿಗೆ ಹಣ್ಣಿನ ಸಸಿಗಳನ್ನು ಕೊಡತಕ್ಕದ್ದು. ತಾವು ಈ ಯೋಜನೆಗೆ ಫಲಾನುಭವಿಗಳನ್ನು ಗುರುತಿಸಿದ್ದೀರಿ. ತಾವು ಫಲಾನುಭವಿಗಳನ್ನು ಗುರುತಿಸಬೇಕಾದರೆ ಯಾವ ರೀತಿಯಲ್ಲಿ, ಯಾವ ಆಧಾರದ ಮೇಲೆ ಗುರುತಿಸಿದ್ದೀರಿ? ಈ ಯೋಜನೆಯ ಸೌಲಭ್ಯವನ್ನು ಬಡವರಿಗೆ ಮತ್ತು ಸಾರ್ವಜನಿಕರಿಗೆ ಕೊಡಬಹುದೆಂದಿದೆ. ಆ ರೀತಿ ಬಡವರಿಗೆ ಎಷ್ಟು ಸಾರ್ವಜನಿಕರಿಗೆ ಎಷ್ಟು ಜನರಿಗೆ ಕೊಟ್ಟಿದ್ದೀರಿ? ಅವತ್ತು ನಮ್ಮ ಸರ್ಕಾರದ ವ್ಯಾಪ್ತಿಗೆ ಬರತಕ್ಕ 54 ಘಾರಂಗಳು ಇದ್ದಂಥ ಸಂದರ್ಭದಲ್ಲಿ ಅಲ್ಲಿ ಮಾವಿನ, ದಾಳಿಂಬೆ ಸಸಿಗಳು ಇರಲಿಲ್ಲವೆ? ಅವೆಲ್ಲವನ್ನೂ ಬಿಟ್ಟು ಕೃಷ್ಣಗಿರಿಗೆ ಹೋಗಿ ಕೊಂಡುಕೊಳ್ಳತಕ್ಕ ಪ್ರಮೇಯವೇನಿತ್ತು?

+ಶ್ರೀ ಡಿ.ಟಿ.ಜಯಕುಮಾರ್:- ಮಾನ್ಯ ಅಧ್ಯಕ್ಷರೆ, ಹೊಂಬಳ್ಳಿ ಯೋಜನೆ ಬಹಳ ಉತ್ತಮವಾದಂಥ ಯೋಜನೆ. ಇದರ ಸೌಲಭ್ಯವನ್ನು ಎಲ್ಲರಿಗೂ ಕೊಡುವುದಿಲ್ಲ. ಸಣ್ಣ ರೈತ, ಅತೀ ಸಣ್ಣ ರೈತ, ಪರಿಶಿಷ್ಟ ಜಾತಿ ಮತ್ತು ಪಂಗಡದ ಒಂದು ಇಲ್ಲವೆ ಎರಡು ಎಕರೆ ಭೂಮಿಯನ್ನು ಹೊಂದಿರುವವರಿಗೆ ಈ ಸೌಲಭ್ಯವನ್ನು ಕೊಡುತ್ತೇವೆ. 1994-95ನೇ ಸಾಲಿನಲ್ಲಿ ಈ ಯೋಜನೆ ಶಿರಾ ಮತ್ತು ಪಾವಗಡ ತಾಲ್ಲೂಕಿಗೆ ಮಂಜೂರಾಯಿತು. ಆದರೆ ತಡವಾಗಿ ಮಂಜೂರಾಗಿದ್ದರಿಂದ ನಾವು 1995-96ನೇ ಸಾಲಿಗೆ ಅನುಮತಿಯನ್ನು ಪಡೆದು ಈ ಸಾಲಿಗೆ ಅದನ್ನು ಜಾರಿಗೆ ತಂದಿದ್ದೇವೆ. ಸುಮಾರು 1215 ಫಲಾನುಭವಿಗಳಿಗೆ ಈ ಯೋಜನೆಯ ಸೌಲಭ್ಯದಂತೆ ಸಸಿಗಳನ್ನು ಕೊಟ್ಟಿದ್ದೇವೆ. ಅದರಲ್ಲಿ 37,125 ಮಾವು, 6666 ಸಪೋಟ, ಎರಡು ಸಾವಿರ ಹುಣಸೇ ಸಸಿ, ದಾಳಿಂಬೆ 3060 ಸಸಿಗಳನ್ನು ಒಟ್ಟು 48,851 ಸಸಿಗಳನ್ನು ಒದಗಿಸಿದ್ದೇವೆ. ಇದರಲ್ಲಿ ಯಾವುದೇ ರೀತಿಯಾದ ಲೋಪದೋಷಗಳು ಕಂಡುಬಂದಿಲ್ಲ. ಆ ರೀತಿ ಏನಾದರೂ ಆಗಿದ್ದರೆ ತಾವು ಅದರ ಬಗ್ಗೆ ನಿರ್ದಿಷ್ಟವಾಗಿ ಹೇಳಿದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ:- ತಾವು ಫಲಾನುಭವಿಗಳನ್ನು ಗುರುತಿಸಬೇಕಾದರೆ ಯಾವ ನಿಯಮದ ಅನುಸಾರ ಯಾರ ಮೂಲಕ ಗುರುತಿಸಿದ್ದೀರಿ? ನಿಮ್ಮ ಹತ್ತಿರ ಅಂದು ಸಸಿಗಳು ಇರಲಿಲ್ಲವೆ? ಹೊರರಾಜ್ಯದಿಂದ ಸಸಿಗಳನ್ನು ತರತಕ್ಕ ಅವಶ್ಯಕತೆ ಏನಿತ್ತು?

ಶ್ರೀ ಡಿ.ಟಿ.ಜಯಕುಮಾರ್:- ಮಾನ್ಯ ಅಧ್ಯಕ್ಷರು, ಯಾವುದೇ ಸಂದರ್ಭದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾದರೆ ಅದು ಗ್ರಾಮಸಭೆಯಲ್ಲಿ ಆಯ್ಕೆಯಾಗುತ್ತದೆ. ಸರ್ಕಾರದ ಆದೇಶದ ಪ್ರಕಾರ ಗ್ರಾಮಸಭೆಯಲ್ಲಿಯೇ ಫಲಾನುಭವಿಗಳ ಆಯ್ಕೆಯಾಗಬೇಕು. ಈ ಯೋಜನೆ ತರುವಲ್ಲಿ ಜರೂರಾಗಿದ್ದರಿಂದ ಬಹುಶಃ ಕೆಲವು ಅಧಿಕಾರಿಗಳು ರೈತರು ಯಾರು ಅರ್ಜಿಯನ್ನು ಕೊಟ್ಟಿರುತ್ತಾರೆ ಅದನ್ನೇ ಆಧಾರವಾಗಿಟ್ಟುಕೊಂಡು ಆಯ್ಕೆ ಮಾಡಿರಬಹುದು. ಇದರಲ್ಲಿ ಲೋಪದೋಷಗಳಿದ್ದರೆ ಸರಿಪಡಿಸುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಫಲಾನುಭವಿಗಳನ್ನು ಗುರುತಿಸಬೇಕಾದರೆ, ಜಿಲ್ಲಾಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮಪಂಚಾಯತಿ ವ್ಯವಸ್ಥೆ ಇದ್ದಾಗಲೂ ಒಂದು ಸಲವೂ ವಿಷಯ ಪ್ರಸ್ತಾಪಕ್ಕೆ ಬರಲಿಲ್ಲ. ಪ್ರತಿ ಸಂದರ್ಭದಲ್ಲೂ ನಿಯಮವನ್ನು ಗಾಳಿಗೆ ತೂರಿ ಕೆಲಸ ಮಾಡಿದ್ದಾರೆ. ಇದರ ಬಗ್ಗೆ ಆರೋಪ ಬಂದಿದ್ದರೂ ಸಹ ಇಲ್ಲಿಯವರೆಗೆ ಅದನ್ನು ಸರಿಪಡಿಸುವ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ನಿಮ್ಮ ವ್ಯವಸ್ಥೆ ಇದ್ದರೂ ಸಹ ಯಾವ ನಿಯಮವನ್ನು ಪಾಲನೆ ಮಾಡದಿರುವುದರಿಂದ ಅದು ಪ್ರಯೋಜನವಿಲ್ಲದಂತಾಗಿದೆ. ಬಡ ರೈತರಿಗೆ ಕೊಡಬೇಕು, ಬೇರೆಯವರಿಗೆ ಕೊಡಬೇಕಾದರೆ ವೆಚ್ಚದ ಐವತ್ತು ಭಾಗ ವಸೂಲಿ ಮಾಡಬೇಕೆಂದಿದೆ, ಒಬ್ಬರು ಬಡವರಿಗೆ ಸಸಿಗಳನ್ನು ಕೊಡಲಿಲ್ಲ, ಸಂತೆಯಲ್ಲಿ ಮಾರಾಟ ಮಾಡಿಸಿದರು, ಬೇರೆಯವರಿಗೆ ಸಸಿಗಳನ್ನು ಕೊಟ್ಟಿದ್ದರೆ ಅವರಿಂದ ಐವತ್ತು ಪರ್‌ಸೆಂಟ್ ಹಣದಲ್ಲಿ ಎಷ್ಟು ವಸೂಲಿ ಮಾಡಿದ್ದೀರೀ? ಒಬ್ಬರಿಂದ ಹಣ ಬಂದಿಲ್ಲ, ಆದ್ದರಿಂದ ಯಾರ್‍ಯಾರಿಗೆ ಕೊಟ್ಟಿದ್ದೀರೆಂದು ನಾನು ಕೇಳಿದ್ದುದು. ಅಂದು ಸಸಿಗಳನ್ನು ಕೊಡಬೇಕಾದರೆ ಅದು ಕರ್ನಾಟಕದಲ್ಲೇ ಲಭ್ಯವಿತ್ತು. ಆದರೆ ಕೃಷ್ಣಗಿರಿಗೆ ಹೋಗಿ 19 ಲಕ್ಷ ಖರ್ಚುಮಾಡಿ ಮಾವಿನ ಸಸಿಗಳನ್ನು ತಂದರು. ಅದರ ಅವಶ್ಯಕತೆ ಇತ್ತೆ? ಆ 19 ಲಕ್ಷ ರೂಪಾಯಿಗಳಲ್ಲಿ ಕೇವಲ 6 ಲಕ್ಷ ರೂಪಾಯಿಗಳ ಸಸಿಗಳು ಇಲ್ಲಿಗೆ ಬಂತು, ಅದನ್ನೂ ಸಂತೆಯಲ್ಲಿ ಮಾರಿದರು. ನೀವು ಗೊಬ್ಬರವನ್ನೇ ಕೊಟ್ಟಿಲ್ಲ, ಅದರ ಪರಿಷ್ಕರಣ ವೆಚ್ಚವನ್ನೂ ಮಾಡಿಲ್ಲ.

12-10 ಪಿ.ಎಂ.

ಹೀಗಿರುವಾಗ ಈ ಸ್ಕೀಮ್ ಅನ್ನು ನೀವು ಮುಂದುವರೆಸಿದ್ದೀರಿ. ವೆಚ್ಚವನ್ನೇ ಮಾಡಿಲ್ಲ ಎಂದಾಗ ಇದನ್ನು ಯಾವ ರೀತಿಯಾಗಿ ಮುಂದುವರಿಸುತ್ತಿದ್ದೀರಿ? ಹಣವನ್ನು ಕೊಟ್ಟೇ ಇಲ್ಲ ಎಂದರೆ, ಆ ಹಣ ಏನಾಯಿತು? ಅದು ದುರುಪಯೋಗವಾಯಿತೇ? ದಯಮಾಡಿ ನಾನು ಹೇಳತಕ್ಕದ್ದು ಇಷ್ಟೆ, ಇದರಲ್ಲಿ ಸುಮಾರು 60 ಲಕ್ಷ ರೂ.ಯೋಜನೆಯಲ್ಲಿ, ನಾನು ನೇರವಾಗಿ ಆರೋಪ ಮಾಡಿದ್ದೇನೆ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಎಲ್ಲಾ ಕಡೆ ನಾನು ಆರೋಪ ಮಾಡಿದ್ದೇನೆ, ಸುಮಾರು 20-25 ಲಕ್ಷ ರೂ.ಗಳಿಗೂ ಹೆಚ್ಚಿನ ಅವ್ಯವಹಾರ ನಡೆದಿರತಕ್ಕ ಒಂದು ಯೋಜನೆ ಇದು. ಶಿರಾ ತಾಲ್ಲೂಕಿಗೆ ಕೊಡಬೇಕಾಗಿರತಕ್ಕಂತಹ, ಸೀಮಿತವಾಗಿರತಕ್ಕಂತಹ ಈ ಒಂದು ಯೋಜನೆಯಲ್ಲಿ ಇಷ್ಟು ಅವ್ಯವಹಾರ ಆದಾಗ, ನಾವು ಅದರ ವಿರುದ್ಧವಾಗಿ ಧ್ವನಿ ಎತ್ತಿದ್ದರೂ ಸಹಿತ, ಇದುವರೆವಿಗೂ ಸರ್ಕಾರ ಇದರ ಬಗ್ಗೆ ಚಕಾರ ಎತ್ತದಿರುವ ಸಂದರ್ಭದಲ್ಲಿ ನಾನು ಇಲ್ಲಿ ನಿಮ್ಮನ್ನು ಏನು ಪ್ರಶ್ನೆ ಮಾಡಬೇಕು ದಯಮಾಡಿ ಹೇಳಿ? ದಯಮಾಡಿ, ಇದರಲ್ಲಿ ಮೂಲತಃ ಗಿಡವನ್ನು ಕೊಳ್ಳುವುದರಿಂದ ಹಿಡಿದುಕೊಂಡು ಹಂಚುವವರೆಗೂ ಕೂಡ ನೂರಕ್ಕೆ ನೂರರಷ್ಟು ಮೋಸವಾಗಿದೆ. ಯೋಜನೆಯ ಎಲ್ಲಾ ನಿಯಮಗಳನ್ನು, ಷರತ್ತುಗಳನ್ನು ಗಾಳಿಗೆ ತೂರಿರುವಂತಹ ಸಂದರ್ಭದಲ್ಲಿ, ದಯಮಾಡಿ ಇದರ ಬಗ್ಗೆ ಸಿ.ಓ.ಡಿ ತನಿಖೆ ಮಾಡಿಸಿ. ಇಲ್ಲದಿದ್ದರೆ ಯಾರಾದರೂ ಒಮ್ಮೆ ಪ್ರಾಮಾಣಿಕ ಅಧಿಕಾರಿಯ ಕಡೆಯಿಂದ ಎನ್‌ಕ್ವೈರಿ ಮಾಡಿಸಿ. ಖಂಡಿತವಾಗಿಯೂ 20 ಲಕ್ಷ ರೂ.ಗಳಿಗಿಂತ ಹೆಚ್ಚು

ಅವ್ಯವಹಾರ ಆಗಿರತಕ್ಕದ್ದು ಇವತ್ತು ಹೊರಗೆ ಬರುತ್ತದೆ. ತಪ್ಪಿತಸ್ಥರಿಗೆ ತಕ್ಕ ಶಾಸ್ತಿ ಮಾಡಬಹುದು, ಪಾಠವನ್ನು ಕಲಿಸುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರ ಇದಕ್ಕೆ ತಯಾರಿದೆಯೇ?

+ಶ್ರೀ ಡಿ.ಟಿ.ಜಯಕುಮಾರ್:- ಗಿಡಗಳಿಗೆ ಫಸ್ಟ್ ನಾವೇ ಗುಣಿ ತೋಡಿಸುತ್ತೇವೆ, ಕೂಲಿ ಕೊಡುತ್ತೇವೆ, ಗಿಡಗಳನ್ನು ಕೊಡುತ್ತೇವೆ. ಮತ್ತು ಮೂರು ವರ್ಷ ಇದನ್ನು ಮೇಂಟೇನ್ ಮಾಡಿ ಸಣ್ಣ ರೈತರಿಗೆ ಕೊಡತಕ್ಕ ಒಂದು ಯೋಜನೆ ಇದು. 1994-95ನೇ ಇಸವಿಯಿಂದ 1996-97ನೇ ಇಸವಿಗೆ ಇನ್ನೂ ಹಣ ಬಿಡುಗಡೆ ಆಗಿಲ್ಲ. ಈ ವರ್ಷ ನಾವು ಬಿಡುಗಡೆ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಇಲ್ಲಿ ಅವ್ಯವಹಾರ ಆಗಿದೆ ಎಂದು ಏನು ಕಾಳಜಿ ಇದೆ, ಅದರ ಬಗ್ಗೆ ಕ್ರಮ ಕೈಗೊಂಡ ಬಗ್ಗೆ ಹೇಳುವುದಾದರೆ, ಈಗಾಗಲೇ ನಾನು ರಾಜ್ಯ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ನಿರ್ದಿಷ್ಟವಾದಂತಹ ಸೂಚನೆಗಳನ್ನು ನೀಡಿದ್ದೇನೆ. ಏಕೆಂದರೆ ಮಾನ್ಯ ಸದಸ್ಯರ ಈ ಪ್ರಶ್ನೆ ತಡೆ ಹಿಡಿದ ಪ್ರಶ್ನೆಯಾಗಿದೆ. ಈಗಾಗಲೇ ಇಲಾಖೆಯ ಜೆ.ಡಿ. (ಅಭಿವೃದ್ಧಿ)ರವರನ್ನು ಸ್ಥಳ ಪರಿಶೀಲನೆ ಮಾಡಿ ಅಲ್ಲಿ ಏನಾದರೂ ಲೋಪದೋಷಗಳು, ಆಗಿದ್ದರೆ, ಅವ್ಯವಹಾರಗಳು ಆಗಿದ್ದರೆ ನನಗೆ ವರದಿ ಸಲ್ಲಿಸಿ ಎಂದು ಸೂಚನೆ ನೀಡಿರುತ್ತೇನೆ.

ಕೇವಲ ಮಾನ್ಯ ಶಿರಾ ಸದಸ್ಯರೊಬ್ಬರೇ ಅಲ್ಲ, ಈ ಸದನದಲ್ಲಿರತಕ್ಕ ಎಲ್ಲಾ ಗೌರವಾನ್ವಿತ ಸದಸ್ಯರುಗಳನ್ನು ನಮ್ಮ ಇಲಾಖೆಯಲ್ಲಿ ಇರತಕ್ಕ ಯಾವುದೇ ಯೋಜನೆಯಲ್ಲಾದರೂ ಕೂಡ ಅವ್ಯವಹಾರಗಳು ನಡೆದಿದ್ದರೆ, ಅಂತಹವುಗಳನ್ನು ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತನ್ನಿ ಎಂದು ಕೋರುತ್ತೇನೆ. ಅವುಗಳ ಬಗ್ಗೆ ನಾನು ಸೂಕ್ತವಾದ ಕ್ರಮವನ್ನು ತೆಗೆದುಕೊಂಡು, ಅದಕ್ಕೆ ಯಾವುದೇ ರೀತಿ ಎನ್‌ಕ್ವೈರಿ ನಡೆಸಿ, ತಪ್ಪಿತಸ್ಥರು ಯಾರಿದ್ದಾರೆ ಅವರಿಗೆ ತಕ್ಕ ಶಿಕ್ಷೆಯನ್ನು ಕೊಡುತ್ತೇನೆ ಎನ್ನತಕ್ಕ ಮಾತನ್ನು ಮಾನ್ಯ ಸದಸ್ಯರೆಲ್ಲರಿಗೂ ಹೇಳಲಿಚ್ಛಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಮಂತ್ರಿಗಳು ಜನರಲ್ಲಾಗಿ ಆ ರೀತಿ ಹೇಳಬೇಡಿ, ಆಗಿದ್ದರೆ, ಬಿಟ್ಟಿದ್ದರೆ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಬೇಡಿ. ನಾನೇ ಇಲ್ಲಿ ನೇರವಾಗಿ ಅವ್ಯವಹಾರ ಆಗಿದೆ ಎಂದು ಆರೋಪ ಮಾಡುತ್ತಿದ್ದೇನೆ. 20 ಲಕ್ಷ ರೂ.ಗಳಿಗೂ ಹೆಚ್ಚು ಮೊತ್ತದ ಅವ್ಯವಹಾರ ಆಗಿದೆ ಎಂದು ನಾನು ಹೇಳಬೇಕಾದರೆ ಇವು ಇದರ ಬಗ್ಗೆ ತನಿಖೆ ಮಾಡಿಸಬೇಕಾಗುತ್ತದೆ. 'ಗೊಬ್ಬರ' ಎಂದು ಅಸಿಸ್ಟೆಂಟ್ ಡೈರೆಕ್ಟರ್‌ರವರ ಅಫೀಸಿನಲ್ಲಿ ಇಟ್ಟಿದ್ದಾರೆ.

ಅಧ್ಯಕ್ಷರು:- ಎನ್‌ಕ್ವೈರಿ ಮಾಡಿಸುತ್ತಿದ್ದೇನೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ:- ನಮ್ಮ ಕಡೆ ಸಿದ್ದ ಮಣ್ಣು ಎಂದು ಸಿಗುತ್ತದೆ, ತಪ್ಪಲು ಕಡೆಯೂ ಸಿಗುತ್ತದೆ, ಆ ಸಿದ್ದ ಮಣ್ಣು ಮಿಕ್ಸ್ ಮಾಡಿರತಕ್ಕ ಗೊಬ್ಬರವನ್ನು ತಂದಿರತಕ್ಕದ್ದನ್ನು ಕಳೆದ ಮೂರು ದಿವಸಗಳ ಹಿಂದೆ ಸ್ವತಃ ನಾನೇ ನೋಡಿದ್ದೇನೆ.

ಆದ್ದರಿಂದ ದಯಮಾಡಿ ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿ.

ಶ್ರೀ ಡಿ.ಟಿ.ಜಯಕುಮಾರ್:- ಮಾನ್ಯ ಅಧ್ಯಕ್ಷರೆ, ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ:- ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ.ಟಿ.ಜಯಕುಮಾರ್:- ವ್ಯವಸ್ಥೆ ಆ ರೀತಿ ಇದೆ.

ಶ್ರೀ ಟಿ.ಬಿ.ಜಯಚಂದ್ರ:- ನಾನು ಸಿ.ಓ.ಡಿ. ಎನ್‌ಕ್ವೈರಿ ಮಾಡಿಸಿ ಎಂದು ಹೇಳುತ್ತಿದ್ದೇನೆ. ಹೋಗಲಿ ಡಿಪಾರ್ಟ್‌ಮೆಂಟಿನವರು ಇಂತಹವರು ಅಂತಲಾದರೂ ಹೇಳಲಿ.

ಅಧ್ಯಕ್ಷರು:- ನಮ್ಮ ಇನ್‌ಫ್ಲೂಯೆನ್ಸ್ ಯಾರೂ ಇಲ್ಲದಿರುವವರು ಸಿ.ಓ.ಡಿ.ಗೆ ಹೋಗಿದ್ದಾರೆ. ಸಿ.ಓ.ಡಿ. ಎನ್‌ಕ್ವೈರಿ ಮಾಡಿಸಿದರೂ ಅದೇ.

+ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಸಮಸ್ಯೆ ಬಗೆಹರಿಸಲು ಸರ್ಕಾರಕ್ಕೆ ಈಗಾಗಲೇ ನಾವೊಂದು ಸಲಹೆ ಕೊಟ್ಟಿದ್ದೇವೆ. ಆ ಸಲಹೆಯನ್ನು ಅನುಷ್ಠಾನಕ್ಕೆ ತಂದರೆ ಈ ಸಮಸ್ಯೆ ಬಗೆಹರಿಯುತ್ತದೆ. ಇಡೀ ಒಂದು ಕ್ಷೇತ್ರದ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ ಸದಸ್ಯರು, ಹಾಗೂ ಶಾಸಕರುಗಳು, ಸಂಬಂಧಪಟ್ಟ ಎಲ್ಲಾ ಇಲಾಖೆಯ ಸರ್ಕಾರಿ ಅಧಿಕಾರಿಗಳು ಸೇರಿ ವರ್ಷಕ್ಕೆರಡು ಮೀಟಿಂಗ್ ಮಾಡಿ ಸರ್ಕಾರದಿಂದ ಏನೇನು ಸವಲತ್ತುಗಳನ್ನು ಕೊಡುತ್ತೀರಿ, ಫಲಾನುಭವಿಗಳನ್ನು ಯಾವ ಯಾವ ರೀತಿ ಗುರುತು ಮಾಡಿದ್ದೀರಿ? ಯಾರ್ಯಾರಿಗೆ ತಲುಪಿದೆ? ಎನ್ನುವ ರೀತಿಯಲ್ಲಿ ರಿವ್ಯೂ ಮಾಡತಕ್ಕ ಒಂದು ವ್ಯವಸ್ಥೆ ಮಾಡಿದರೆ ಅವರು ಹೇಳತಕ್ಕಂತಹ ಸಮಸ್ಯೆ ಬಗೆಹರಿಯುತ್ತದೆ. ಉದಾಹರಣೆಗೆ ಮಾನ್ಯ ಕೃಷಿ ಮಂತ್ರಿಗಳಿಗೆ ಈ ರೀತಿ ಒಂದು ಸಮಸ್ಯೆ ಇದೆ. ಈಗ ಇಂಡಾಫ್-11 ರಾಗಿ ಬಹಳ ಬೇಕು, ಆದರೆ ಇಂಡಾಫ್ ಐಆರ್-11 ಎಂಬ ಎರಡು ರಾಗಿ ತಳಿಗಳು ಮುಖ್ಯವಾಗಿ ಬಿತ್ತನೆ ಬೀಜವಾಗಿ ಬೇಕು. ಆದಕ್ಕೆ ಸಬ್ಸಿಡಿ ಇಲ್ಲ. ಇಂಡಾಫ್-9ಗೆ ಸಬ್ಸಿಡಿ ಕೊಡುತ್ತಾರೆ. ಯಾವುದು ಜನಕ್ಕೆ ಬಹಳ ಅವಶ್ಯಕತೆ ಇದೆಯೋ, ರಾಗಿ ಬಹಳ ಮುಖ್ಯವಾದ ಬೆಳೆ, ಜೊತೆಗೆ ಅದನ್ನು ಬೆಳೆಯುವುದೂ ಬಹಳ ಕಷ್ಟ. ಅಂತಹ ರೈತನಿಗೆ ಕನಿಷ್ಟ ಸಬ್ಸಿಡಿ ಸೌಲಭ್ಯ ಒದಗಿಸದೇ, ಇಂಡಾಫ್-9ಗೆ ಮಾತ್ರ ಸಬ್ಸಿಡಿ ಕೊಟ್ಟು, ಇಂಡಾಫ್-8 ಮತ್ತು ಐಆರ್-11 ಎರಡಕ್ಕೂ ಸಬ್ಸಿಡಿ ತೆಗೆದುಹಾಕಿದ್ದೀರಿ. ತ್ವರಿತವಾಗಿ ತಾವು ಅದಕ್ಕೂ ಕೂಡ ಸಬ್ಸಿಡಿ ಕಂಟಿನ್ಯೂ ಮಾಡಬೇಕೆಂದು ಆದೇಶ ಕೊಡಬೇಕು. ದಯವಿಟ್ಟು ತೋಟಗಾರಿಕಾ ಇಲಾಖೆಯವರು ನಾನು ಹೇಳಿದ ರೀತಿ ರಿವ್ಯೂ ಮಾಡಿದರೆ ಸಮಸ್ಯೆ ಬಗೆಹರಿಯುತ್ತದೆ.

ಶ್ರೀ ಡಿ.ಟಿ.ಜಯಕುಮಾರ್:- ಪಂಚಾಯಿತಿ ರಾಜ್ ವ್ಯವಸ್ಥೆ ಬಂದ ಮೇಲೆ ಎಲ್ಲಾ ಇಲಾಖೆಗಳಲ್ಲೂ ಕೂಡ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂತಹ ಅಧಿಕಾರ ಗ್ರಾಮ ಸಭೆಗೆ ಇದೆ. ಬಹುಶಃ ಗ್ರಾಮ ಸಭೆ ಸರಿಯಾಗಿ ನಡೆಯದೇ ಇರುವ ಪ್ರಯುಕ್ತ ಅಲ್ಲಿನ ಶಾಸಕರೂ ಸಹಿತ ಆ ಸಭೆಯಲ್ಲಿ ಭಾಗವಹಿಸಬೇಕಾಗುತ್ತದೆ, ಅಲ್ಲಿ ನಡೆಯುವ ಸಭೆಯಲ್ಲಿ

ಶಾಸಕರು ಭಾಗವಹಿಸಿ ಸರ್ಕಾರಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡಿ ಕೊಟ್ಟರೆ ಸರ್ಕಾರಕ್ಕೂ ಒಳ್ಳೆಯದಾಗುತ್ತದೆ, ಇಲಾಖೆಗೂ ಒಳ್ಳೆಯದಾಗುತ್ತದೆ, ಈ ರೀತಿ ಅವ್ಯವಹಾರ ನಡೆಯುವುದಕ್ಕೆ ಆಸ್ಪದವೂ ಇರುವುದಿಲ್ಲ. ಮಾನ್ಯ ಸದಸ್ಯರೆಲ್ಲರಿಗೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ದಯಮಾಡಿ ಗ್ರಾಮ ಸಭೆಯಲ್ಲಿ ಅವರೂ ಕೂಡ ಭಾಗವಹಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಕೋರುತ್ತೇನೆ. ಇಂಡಾಫ್ ರಾಗಿ ಬಗ್ಗೆ ನಮ್ಮ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ. ವ್ಯವಸಾಯ ಮಂತ್ರಿಗಳು ಅದಕ್ಕೆ ಉತ್ತರಿಸುತ್ತಾರೆ.

ಅಧ್ಯಕ್ಷರು:- ಈಗ ಪ್ರಶ್ನೋತ್ತರ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ದಿನಾಂಕ 12.7.96ರ 6ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 57 ಪ್ರಶ್ನೆಗಳ ಪೈಕಿ 43 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ಹಿರೇಕೆರೂರು ಡಿಪೋದಿಂದ ರಾಜ್ಯದ ರಸ್ತೆ ಸಾರಿಗೆ ಬಸ್‌ಗಳ ಟ್ರಿಪ್‌ಗಳನ್ನು 1-6-96ರಿಂದ 20-6-96ರಲ್ಲಿ ರದ್ದುಗೊಳಿಸಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 216 (107)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1-6-96ರಿಂದ 20-6-96ರವರೆಗೆ ಹಿರೇಕೆರೂರು ಡಿಪೋದಿಂದ ಪ್ರತಿ ದಿವಸ ರದ್ದಾದ ಅನುಸೂಚಿಗಳು ಎಷ್ಟು? ಅವು ಯಾವುವು, ಪೂರ್ತಿಯಾಗಿ ಓಡಿಸದ ಅನುಸೂಚಿಗಳು ಎಷ್ಟು? ಪ್ರತಿ ದಿವಸ ಒಂದು ಗಂಟೆಗಿಂತ ತಡವಾಗಿ ಹೋದ ಅನುಸೂಚಿಗಳು ಎಷ್ಟು? ಅವು ಯಾವುವು? ತಡವಾಗಿ ಹೋಗಲು ಕಾರಣ ಏನು?

ಶ್ರೀ ಪಿ.ಜಿ.ಆರ್.ಸಿಂದ್ಯಾ (ಸಾರಿಗೆ ಸಚಿವರು):-

ಅ) 1. ಒಟ್ಟು 74 ಅನುಸೂಚಿಗಳನ್ನು ಸಂಪೂರ್ಣವಾಗಿ ಆಚರಣೆ ಮಾಡಿರುವುದಿಲ್ಲ. ಪ್ರತಿ ದಿವಸದ ವಿವರಗಳು ಅನುಬಂಧ 'ಎ'ನಲ್ಲಿದೆ.

2. ಒಟ್ಟು 80 ಅನುಸೂಚಿಗಳನ್ನು ಭಾಗಶಃ ಆಚರಣೆ ಮಾಡಲಾಗಿದೆ. ಪ್ರತಿ ದಿವಸದ ವಿವರಗಳು ಅನುಬಂಧ 'ಬಿ'ನಲ್ಲಿದೆ.

3. ಒಟ್ಟು 270 ಅನುಸೂಚಿಗಳನ್ನು ತಡವಾಗಿ ಆಚರಣೆ ಮಾಡಲಾಗಿದೆ. ಪ್ರತಿ ದಿವಸದ ವಿವರಗಳು ಅನುಬಂಧ 'ಸಿ'ನಲ್ಲಿದೆ.

ತಡವಾದ ನಿರ್ಗಮನಗಳಿಗೆ ಕಾರಣಗಳು, ನಿರ್ವಾಹಕರ ಕೊರತೆ ಮತ್ತು ವಾಹನ ದುರಸ್ತಿ.